–ಕಾರಣ ಇಯರ್ ಫೋನ್ ತಂದಿರಲಿಲ್ಲ. ಇಯರ್ ಫೋನ್ ತಂದಿದ್ದರೆ ಕೆಲ ಗಂಟೆಗಳಲ್ಲೇ ಏನೆಲ್ಲಾ ರಾಗಗಳನ್ನು ಕೇಳಿಬಿಡುತ್ತಿದ್ದೆ ಎಂದು ಸುಮ್ಮನೆ ಹಳ ಹಳಿಸಿದೆ. ಯಾರೋ ಮಹನೀಯರು ಒಂದಿಷ್ಟು ಪತ್ರಿಕೆಗಳನ್ನು ತಂದು, ತಮ್ಮ ಗುಂಪಿಗೆ ಹಂಚುತ್ತಿದ್ದರು. ಅದನ್ನು ಕಂಡು ಮತ್ತೆ ಹಳ ಹಳಿಕೆ ಮರುಕಳಿಸಿತು. ಒಂಚೂರು ಹೆಡ್ ಲೈನ್ ಮೇಲೆ ಕಣ್ಣಾಡಿಸಲಾದರೂ ಕೊಡ್ತಾರ ಎಂದು ಕೇಳಬೇಕೆಂದುಕೊಂಡೆ. ಪೇಪರಿನ ಮುಖಪುಟ ನೋಡಿದ ಹಾಗೆ ಮಾಡಿ, ಹಾಸಿಕೊಂಡು ಕೂತೇ ಬಿಟ್ಟರು. ಹೌದು, ಟಿವಿಗಿಂತ ಯಾವಾಗಲೂ ನ್ಯೂಸ್ ಪೇಪರೇ ಬೆಟರು, ಬಹೂಪಯೋಗಿ ಅಲ್ವೆ.

ಮುಂಜಾನೆ ಎಂಟು ಗಂಟೆಗೆ ತೆರೆಯುವ ಶಾಲೆಯ ಮುಂದೆ, ನಾವು ಬೆಳಿಗ್ಗೆ ಆರೂವರೆಗೆಲ್ಲಾ ನಿಂತಿದ್ದೇವಲ್ಲಾ... ಏನಿದು ಎಂದು ಪಕ್ಕದವನೊಬ್ಬನನ್ನು ಮಾತನಾಡಿಸಲು ಯತ್ನಿಸಿದೆ. ಆತ ಕೆಕ್ಕರಿಸಿಕೊಂಡು ನೋಡಿ, ಏನೋ ಪಿಟಿ ಪಿಟಿ ಅಂದು ತನ್ನಲ್ಲೇ ತಾನು ತಲ್ಲೀನನಾದ. ಮತ್ತೊಬ್ಬನನ್ನು ಮಾತನಾಡಿಸಿದೆ, 'ಏನು ಇಷ್ಟು ಬೇಗ ಬಂದಿದ್ದಾರೆ ಎಲ್ಲ' ಅಂದೆ. 'ನೀವೇ ಲೇಟಾಗಿ ಬಂದು ಮತ್ತೆ ಮಾತಾಡ್ತೀರಾ... ಅಲ್ನೋಡಿ, ಆ ಮೊದಲ ಎರಡು ಸಾಲುಗಳವರು ನಿನ್ನೆ ರಾತ್ರೀನೇ ಬಂದಿದಾರೆ... ಬಂದ್ರು ಮಾತಾಡೋಕೆ' ಎಂದು ಸುಮ್ ಸುಮ್ನೇ ಹರಿ ಹಾಯ್ದ.

ಹಾಗೇ ಸುಮ್ಮನೆ, ಕಣ್ಣಾಡಿಸಿದೆ, ಅಖಿಲಾಂಡ ಕೋಟಿ ಬ್ರಹ್ಮಾಂಡದ ಪ್ರತಿನಿಧಿಗಳೆಲ್ಲಾ ಇಲ್ಲಿಯೇ ನೆರೆದು, ಸರ್ವ ಜನಾಂಗದ ಶಾಂತಿಯ ತೋಟ ಸೃಷ್ಟಿಸಿದ್ದಾರೆ. ಒಹೋ ಇದೇನಪ್ಪಾ, ಇಷ್ಟು ಜನ ಸೇರಿದ್ದಾಗ, ಒಂಚೂರು ಗಲಾಟೆಯಿಲ್ಲವಲ್ಲ ಎಂದುಕೊಂಡರೆ, ಪಕ್ಕದಲ್ಲಿದ್ದ ಒರಿಸ್ಸಾ ಬಂಧು ಹೇಳಿದ 'ಬಾಸ್... ನಾವು ನಿಂತಿರುವುದು ನಮ್ಮ ಮಕ್ಕಳ ಪ್ರವೇಶಕ್ಕಾಗಿ. ಶಾಲೆ ತುಂಬಾ ಸ್ಟ್ರಿಕ್ಟು. ನಾವೇ ಗಲಾಟೆ ಮಾಡಿದರೆ, ಮಕ್ಕಳಿಗೆ ಸೀಟು ಸಿಗಲಿಕ್ಕಿಲ್ಲ ಎಂಬ ಭೀತಿ ಎಲ್ಲರನ್ನೂ ತಣ್ಣಗಿಟ್ಟಿದೆ' ಎಂದು ಹೊಸ ಗುಟ್ಟು ಹೇಳುವಂತೆ ಹೇಳಿದ.

ನಾನಂತೂ ಶಾಲೆಗೆ ಸೇರಬೇಕಾದರೆ, ಕೊನೇ ಪಕ್ಷ ನನ್ನ ತಂದೆಯವರೂ ಬಂದಿರಲಿಲ್ಲ. ನಾನಾಗೇ ಶಾಲೆಗೆ ಹೋಗಿ, ಮೇಷ್ಟ್ರ ಮುಂದೆ ನಿಂತೆ. ಅವರಿಗೆ ನಾನಾರು, ಏನು ಬೇಕು ಎಂದು ಹೇಳುವ ಮೊದಲೆ 'ಮಣೆ ಮೇಲೆ ಜಾಗ ಹುಡಿಕ್ಯಂಡು ಕುಂತ್ಗ ಹೋಗು' ಎಂದು ಬಿಟ್ಟಿದ್ದರು. ಆಗ ಶಾಲೆಯಲ್ಲಿ ಮಣೆಗಳಿರುವ ಒಂದೇ ಒಂದು ಕ್ಲಾಸಿತ್ತು, ಕಾರಣ ಅದು ಸಗಣಿ ಸಾರಿಸಿದ ನೆಲ, ತೆಂಗಿನ ಗರಿಯಿಂದ ಮಾಡಿಸಿದ ಗುಡಿಸಲು. ಆಮೇಲೆ ಅರ್ಜಿಯನ್ನು ಅವರೇ ತುಂಬಿಕೊಂಡಿರಬೇಕು. 'ಆಹಾ.. ನನ್ನ ಹಳ್ಳಿಯ ಸರ್ಕಾರಿ ಪ್ರಾಥಮಿಕ ಶಾಲೆಯೇ ಎಂದು, ಇಲ್ಲಿದಂಲೇ ನನ್ನ ಆಲ್ಮಾ ಮ್ಯಾಟರಿಗೆ ಥ್ಯಾಂಕ್ಯು' ಎಂದೆ.

ನನ್ನ ಮುಂದೆ ನಿಂತಿದ್ದ ಉತ್ಕಲ ಬಂಧು ನಿಧಾನಕ್ಕೆ ಗೆಳೆಯನೇ ಆಗಲು ಬಹುಕಾಲ ಬೇಕಾಗಲಿಲ್ಲ. ಅದೂ ಇದು ಮಾತನಾಡಲಾರಂಭಿಸಿದೆವು. ಒರಿಸ್ಸಾ ಪ್ರವಾಸೋದ್ಯಮದ ರಾಯಭಾರಿಯಂತೆ, ಎಲ್ಲ ಪ್ರೇಕ್ಷಣೀಯ ಸ್ಥಳಗಳನ್ನು ಪಟ್ಟಿ ಮಾಡಲಾರಂಭಿಸಿದ. ಅಲ್ಲಿಗೆ ಹೋಗು, ಇಲ್ಲಿಗೆ ಹೋಗು. ಅದು ತಗೋ, ಇದನ್ನು ನೋಡು ಇತ್ಯಾದಿ ಪ್ರವರ ಬಿಚ್ಚಿದ. ನಂತರ, ತನ್ನ ಕಂಪನಿಯ ಕಾರುಗಳ ಬಗ್ಗೆ ಕೊರೆದ. ಅವನು ಹೇಳುತ್ತಿದ್ದ ಸ್ಥಳಗಳು ಅಪರಿಚಿತವಾಗಿದ್ದರಿಂದಲೂ ಹಾಗೂ ಸುತ್ತಲು ಗದ್ದಲದ ವಾತಾವರಣವಾಗಿದ್ದರಿಂದಲೂ, ಆತನ ಗಾಢ ಒಡಿಸ್ಸಿ ಸೊಗಡಿನ ಇಂಗ್ಲಿಷ್ ಉಚ್ಚಾರಣೆ, ಕಿವಿ ಮೇಲೆ ಬಿದ್ದರೂ ತಲೆಗೇರುತ್ತಿರಲಿಲ್ಲ. ಮಾತು ತಪ್ಪಿಸಿ, ಕಣ್ಣು ಹೊರಳಿಸಿದೆ.

ಎಂತೆಂಥ ಜನ ನೆರೆದಿದ್ದರು. ದೂರದ ಕಾಶ್ಮೀರದಿಂದ, ಕನ್ಯಾಕುಮಾರಿಯವರೆಗೆ, ಈ ಕಡೆ, ರಾಜಾಸ್ಥಾನ ಅದರಾಚೆಯ ಪಾಕಿಸ್ತಾನದ ಕೆಲ ಭಾಗಗಳಿಂದ ಹಿಡಿದು, ಈಚೆಯ ಬಾಂಗ್ಲಾವರೆಗೆ ಎಲ್ಲರೂ ಅಲ್ಲಿದ್ದಿರಬೇಕು. ಒಂದೆರಡು ಯೂರೋಪಿಯನ್, ಆಫ್ರಿಕನ್, ಮಂಗೋಲಿಯನ್ ತಲೆಗಳೂ ಕಂಡವು. ಚೆನ್ನೈ ಅಂದ್ರೇನೂ ಸಾಮಾನ್ಯವೇ.

ಅಷ್ಟರಲ್ಲಿ, ಸಾಲಿನಲ್ಲಿ ಎಲ್ಲೋ ಸಡಲಿಕೆ, ಏನೋ ಕದಲಿಕೆ. 'ಗಂಟೆ ಮುಂಚೆಯೇ ಅರ್ಜಿ ಕೊಡಲಾರಂಭಿಸಿದರಾ... ಈಗಿನ್ನೂ ಏಳು ಗಂಟೆ' ಎಂದುಕೊಳ್ಳುವಾಗಲೇ, ಮೂರು ಸಾಲು ಮುಂದೆ, ಇಬ್ಬರು ಆಸಾಮಿಗಳು ಚಂದಾ ಕಲೆಕ್ಟ್ ಮಾಡುವವರಂತೆ, ಪುಸ್ತಕದಲ್ಲೇನೋ ಬರೆದುಕೊಳ್ಳುತ್ತಿದ್ದರು. ಏನದು, ಯಾರವರು ಎಂಬುದು ಯಾರಿಗೂ ತಿಳಿಯಲಿಲ್ಲ. ಕೇಳುವ ಆಸಕ್ತಿಯೂ ಇರಲಿಲ್ಲ. ಎಲ್ಲರೂ ಭಯ ಭಕ್ತಿಯಿಂದ ಏನೋ ಹೇಳುತ್ತಿದ್ದರು, ಇವರು ಮತ್ತೇನೋ ಬರೆದುಕೊಳ್ಳುತ್ತಿದ್ದರು. ಆ ಎರಡು ಜೀವಿಗಳು ನನ್ನ